ಶ್ರೀ ಕಡಿದಾಳ್ ಮಂಜಪ್ಪ.—ಆಫೀಸ್ ಪ್ರೊಸೀಜರ್‌ಗಳಲ್ಲಿ ಕೆಲವು ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಯೋಚನೆ ಮಾಡಿದ್ದೇವೆ. ಮತ್ತು ಅದರಂತೆ ತಕ್ಕ ಕಾರ್ಯ ಕ್ರಮಗಳನ್ನು ಕೈಕೊಳ್ಳುತ್ತಿದ್ದೇವೆ.

ಶ್ರೀ ಕೆ. ಪ್ರಭಾಕರ್.—ಈ ಬಗ್ಗೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಡೆಪ್ಯುಟಿ ಅಮಲ್ದಾರರುಗಳನ್ನು ನೇಮಕ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅಭಿಪ್ರಾಯದ ಮಾತು. ಇನಾಂ ರದ್ದಿಯಾತಿ ಕಾನೂನನ್ನು ಜಾರಿಗೆ ಕೊಡುವಾಗ ಎಲ್ಲ ಹೆಚ್ಚು ಕೆಲಸವಿರುತ್ತದೆಂದು ಕಂಡು ಬರುತ್ತದೆಯೋ ಅಲ್ಲಿ ಅಮಲ್ದಾರರುಗಳನ್ನು ನೇಮಕ ಮಾಡುವುದು ಯೋಚನೆಯಲ್ಲದೆ.

ಶ್ರೀ ಕೆ. ಪ್ರಭಾಕರ್.—ಇನಾಂ ರದ್ದಿಯಾತಿಯ ವಿಷಯವೇ ಅಲ್ಲದೆ ಮಂತ್ರಿಗಳ ಟೂರ್‌ಗಳೇ ಮುಂತಾಗಿ ಅನೇಕ ಕೆಲಸಗಳು ಸೇರಿ ಅಮಲ್ದಾರರೂ ಒಬ್ಬ ಟೂರಿಂಗ್ ಆಫೀಸರಾಗಿ ಕೆಲಸ ಬಹಳ ಜಾಸ್ತಿಯಾಗಿದೆ. ಆದ್ದರಿಂದ ಡೆಪ್ಯುಟಿ ಅಮಲ್ದಾರರು ಗಳನ್ನು ನೇಮಕ ಮಾಡುವುದು ಸೂಕ್ತವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವಾಗಲೂ ಈ ಅಮಲ್ದಾರರುಗಳ ಕೆಲಸ ಆಫೀಸ್ ಕೆಲಸ ಮಾತ್ರವೇ ಅಲ್ಲ. ಟೂರ್ ಕೂಡ ಅವರು ಮಾಡಬೇಕಾಗಿದೆ. ಮಂತ್ರಿಗಳು ಮಾಡುವಾಗ ಟೂರ್ ಜೊತೆಯಲ್ಲಿ ಅವರಿರ ಬೇಕೆಂದರೆ, ಅಲ್ಲಿಯೂ ಅವರ ಕೆಲಸ ನಡೆಯುತ್ತ ದೆಂಬುದನ್ನು ಹೇಳಬೇಕಾಗಿಲ್ಲ.

Land Grants to Depressed Classes in Midagesi and other Hoblies.

Q.—674. Sri C. T. HANUMANTHAIAH (Pavagada—Scheduled Castes).—

Will the Government be pleased to state :—

(*a*) the number of petitions received during the year 1954-55 from the Depressed Class people of the three hoblies, *viz.*, Midagesi, Ittigedibbanahalli and Kodagenahalli, in Pavagada and Madhugiri Taluks, praying for grant of lands for the landless as per D.C. Rules ;

(*b*) of them, the number of persons to whom lands have been given away for cultivation ;

(*c*) the number of petitions still pending sanction (the names of persons to be furnished villagewar and hobliwar) ?

A.—Sri Kadidal MANJAPPA (Minister for Revenue and Public Works).—

	Midagesi.	*Ittigedibbanahalli.*	*Kodagenahalli.*
(*a*)	10	... 9	... 11
(*b*)	5	... 6	... 5
(*c*)	2	... 1	... 3

ಶ್ರೀ ಸಿ. ಟಿ. ಹನುಮಂತಯ್ಯ.—ಮಿಡಿಗೇಶಿ ಹೋಬಳಿ ರೆಡ್ಡಿಹಳ್ಳಿಯ ಹರಿಜನರು ಜಮೀನುಬೇಕೆಂದು ಹೇಳಿ ದರಖಾಸ್ತು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ನೆನಪಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—(*a*) ಪ್ರಶ್ನೆಗೆ ಉತ್ತರದಲ್ಲಿ ಮಿಡಿಗೇಶಿ ಹೋಬಳಿಯಿಂದ 10 ಅರ್ಜಿ ಗಳು ಬಂದಿವೆಯೆಂದು ಹೇಳಿದ್ದೀರಿ. ಆ ಹತ್ತು ಅರ್ಜಿ ಗಳಲ್ಲಿ ಇದೂ ಒಂದಾಗಿದೆಯೇ ಎಂಬುದನ್ನು ವಿಚಾರಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯಾರು ದರಖಾಸ್ತು ಕೊಟ್ಟರೆಂದು ಸರ್ಕಾರಕ್ಕೆ ಒಂದು ಅರ್ಜಿ ಕೊಟ್ಟರೆ ಸಾಕಾಗುತ್ತದೆ. ಅದರಮೇಲೆ ವಿಚಾರಿಸುತ್ತೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ಅರ್ಜಿಯನ್ನು ಕೊಟ್ಟಾಗಿದೆ. ಅದರ ಮೇಲೆ ರಿಕಾರ್ಡ್ ಕೂಡ ಆಗಿದೆ. ಅಷ್ಟೆಲ್ಲಾ ಆಗಿದ್ದರೂ ಇದುವರೆಗೂ ಅವರಿಗೆ ಜಮೀನು ಬರದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಿಸುತ್ತೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ಕೊಡಿಗೇನ ಹಳ್ಳಿಗೆ ಸೇರಿದ ಗುಡ್ಡೆಹಳ್ಳಿಯವರು ಅರ್ಜಿ ಹಾಕಿ 10 ವರ್ಷಗಳಾದರೂ ಅದರ ಮೇಲೆ ಮಾಡಬೇಕಾದ ರಿಕಾರ್ಡ್ ಎಲ್ಲಾ ನಡೆದಿದ್ದರೂ ಜಮೀನನ್ನು ಇನ್ನೂ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—Specific ಆಗಿ ಒಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಹೇಳುತ್ತೇನೆ. ಇಲ್ಲದಿದ್ದರೆ ನೋಟೀಸ್ ಕೇಳಬೇಕಾಗುತ್ತದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಇಟ್ಟಿಗದಿಬ್ಬನ ಹಳ್ಳಿಯ ಹರಿಜನರಿಗೆ ಜಮೀನು ಕೊಟ್ಟು, ವ್ಯಾಜ್ಯ ಹತ್ತಿದಮೇಲೆ ಆ ಜಮೀನನ್ನು ಕೊಡದೆ ನಿರಾಕರಿಸಿರು ವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—1954-55 ರಲ್ಲಿ ಎಷ್ಟು ಅರ್ಜಿಗಳು ಬಂದುವು, ಎಷ್ಟು ಏಲೆ ಆದುವು ಎಂದು ತಾವು ಕೇಳಿದ್ದೀರಿ ; ಅದರ ಬಗ್ಗೆ ಉತ್ತರ ಕೊಟ್ಟಿದೆ. ಅದರಂತೆ ಈ ವಿಷಯದ ಬಗ್ಗೆಯೂ ಬೇರೆ ಪ್ರಶ್ನೆಯನ್ನು ಕಳುಹಿಸಿಕೊಟ್ಟರೆ ಉತ್ತರ ಒದಗಿಸ ಬಹುದು.

ಶ್ರೀ ಸಿ. ಟಿ. ಹನುಮಂತಯ್ಯ.—ಇಟ್ಟಿಗದಿಬ್ಬನ ಹಳ್ಳಿಯ ಹರಿಜನರು 1954 ನೆಯ ಇಸವಿಯಲ್ಲಿ ಜಮೀನು ಕೊಡಬೇಕೆಂದು ಹೇಳಿ ದರಖಾಸ್ತು ಕೊಟ್ಟಿದ್ದರು. ಗ್ರಾಮಸ್ಥರ ಮುಂದೆ ಮಹಜರು ಕೂಡ ಆಗಿತ್ತು. ಇಂಥಾದ್ದು ತಮ್ಮ ಮುಂದೆ ಬಂದಾಗ ವಜಾ ಆಯಿತೆಂದು ಗೊತ್ತಾಗಿದೆ. ಇದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ವಜಾ ಆಗಿರಬಹುದು.

ಶ್ರೀ ಸಿ. ಟಿ. ಹನುಮಂತಯ್ಯ.—ಅದಕ್ಕೆ ಕಾರಣ ವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೇ ಬೇರೆ ಪ್ರಶ್ನೆ ಯಾಗಿ ಕೇಳಿದರೆ ಹೇಳುತ್ತೇನೆ.

Loans to Industrial Concerns.

Q.—243. Sri V. VENKATAPPA (Channapatna).—

Will the Government be pleased to state :—

(*a*) the number of loans exceeding Rs. 10,000 granted to persons and